


# ಜೀವಂತ ಪದಸಮೂಹ

ಉತ್ತಮ ಬರವಣಿಗೆ ಓದುಗನಲ್ಲಿ ಯಾವ ಬಗೆಯ ಕೆಲಸ ಮಾಡುತ್ತದೆ? ಅದು ಮನಸ್ಸಿನೊಳಗೆ ತನ್ನದೇ ಬಿಂಬಗಳನ್ನು, ಹೊಸ ಜಗತ್ತೊಂದನ್ನು ಸೃಷ್ಟಿಸುತ್ತದೆ; ಮನುಷ್ಯನನ್ನು, ಬದುಕನ್ನು ಅರಿಯಲು ನೆರವಾಗುತ್ತದೆ. ಇದೆಲ್ಲದರ ಆಚೆಗೂ ಮನುಷ್ಯನನ್ನು ಮಾನವೀಯಗೊಳಿಸುತ್ತಲೂ ಇರುತ್ತದೆ. ಸಿದ್ಧಾಂತ, ತತ್ವಗಳ ಹಂಗು ತೊರೆದಿರುವ ಅದು, ಓದಿದಾಗ ಜೀವ ತಳೆಯುವ ಜೀವಿ; ಯಾವತ್ತೂ ತಣ್ಣಗಿರುವ ಜೀವಂತ ಪದಗಳ ಸಮೂಹ. ಅರಚಾಟ, ಗೊಣಗಾಟ ಅದರ ಗುಣ ಅಲ್ಲ. ಸದ್ದು ಮಾಡುವ ಬರವಣಿಗೆ ನಿರ್ಲಜ್ಜ, ಅಹಂಕಾರದ, ಸ್ವಪ್ರತಿಷ್ಠೆಯ ಗುಣಗಳನ್ನು ಪಡೆದಿರುತ್ತದೆ. ಮತ್ತು ಬೇಗನೆ ಅಸುನೀಗುತ್ತದೆ. ಪ್ರೇಮಿ ತನ್ನ ತನ್ನ ಹುಡುಗಿಯ ಕಿವಿಯಲ್ಲಿ ಸಂಕೋಚದಿಂದ ಉಸುರುವ ಪಿಸುಮಾತು ಅದರ ನಿಜ ಮತ್ತು ಸಹಜಸ್ವಭಾವ. 'ಮಯೂರ' ಎಂದಿನಿಂದಲೂ ಇಂತಹ ಜೀವಂತ ಬರಹಗಳಿಗೆ ಜಾಗ ಕೊಡುತ್ತ ಬಂದಿದೆ. ಈ ಸಂಚಿಕೆಯಲ್ಲೂ ವಿವಿಧ ತಲೆಮಾರುಗಳಿಗೆ, ಪ್ರದೇಶಗಳಿಗೆ ಸೇರಿದ ಲೇಖಕರ ಬರಹಗಳಿವೆ.

ಕನ್ನಡಿಗರ ಮನಸ್ಸುಗಳನ್ನು ಪೊರೆದ ಮೂವರು ಧೀಮಂತರು ನಿರ್ಗಮಿಸಿದ್ದಾರೆ. ಬಣ್ಣದ ಚಿತ್ರಗಳಲ್ಲಿ ಜನಪದರ ಬದುಕನ್ನು ಚಿತ್ರಿಸಿದ ಎಂ.ಬಿ. ಪಾಟೀಲ, ಕತೆಗಾರ ವೀರಭದ್ರ, ವಿಚಾರವಾದಿ ಲೇಖಕ ಬಿ.ವಿ. ವೀರಭದ್ರಪ್ಪ ಅವರನ್ನು ಕನ್ನಡ ನಾಡು ಕಳೆದುಕೊಂಡಿದೆ. ಈ ಮೂವರೂ ತಮ್ಮದೇ ರೀತಿಯಲ್ಲಿ ನಾಡಿಗೆ ತಮ್ಮ ಕಾಣ್ಕೆಯನ್ನು ಕೊಟ್ಟವರು; ಜನಮಾನಸವನ್ನು ಮುಟ್ಟಿದವರು. ಇವರ ಕುರಿತ ನುಡಿಚಿತ್ರಗಳು ಈ ಸಂಚಿಕೆಯಲ್ಲಿವೆ.

2017ರ ಮ್ಯಾನ್ ಬುಕರ್ ಪ್ರಶಸ್ತಿ ಪಡೆದ ಇಸ್ರೇಲ್ ಲೇಖಕ ಡೇವಿಡ್ ಗ್ರಾಸ್‌ಮನ್‌ರ ಕಾದಂಬರಿ 'ಎ ಹಾರ್ಸ್ ವಾಕ್ಸ್ ಇಂಟು ಎ ಬಾರ್' ಬಗೆಗಿನ ಮನನೀಯ ಬರಹ ಈ ಬಾರಿಯ ವಿಶೇಷ. ಇಲ್ಲಿನ ವೈವಿಧ್ಯಮಯ ಬರಹಗಳು ಓದುಗರ ಮೆಚ್ಚುಗೆಗೆ ಪಾತ್ರವಾಗಬಹುದು.

**ಸಂದೀಪ ನಾಯಕ**